**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ** 5045/2024 ಪ್ರಾಸಾ-06
ಚಾಸಾ-07

ದಿನಾಂಕಃ 17-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಕೆ.ಎನ್ ಪೃದ್ವಿ ಭಾ |
| **ತಂದೆಯ / ಗಂಡನ ಹೆಸರು** | ರಾಮೇಗೌಡ |
| **ವಯಸ್ಸು** | 41 |
| **ಉದ್ಯೋಗ** | ಪಿ.ಡಿ.ಓ, ತೊಂಡೇಭಾವಿ ಪಂಚಾಯಿತಿ, ಗೌರೀಬಿದನೂರು |
| **ವಾಸಸ್ಥಳ** | ಗೌರೀಬಿದನೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

**ನಾನು ದಿ. 01.04.2024 ರಿಂದ 31.03.2025 ರವರೆಗೆ ನಾನು ಪಿ.ಡಿ.ಓ ಅರಸಾಪುರ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ. 03.09.2024 ರಂದು ಕೊರಟಗೆರೆ ಠಾಣೆಯ ಪಿ.ಎಸ್.ಐ ರವರು ಘಟನೆ ನಡೆದ ಸ್ಥಳದ ದಾಖಲಾತಿಗಳನ್ನು ಕೊಡುವಂತೆ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ಸ್ವೀಕರಿಸಿ ಸ್ಥಳದ ಬಗ್ಗೆ ಪರಿಶೀಲನೆ ಮಾಡಿ ಬಾರ್ ಅಂಡ್ ರೆಸ್ಟೋರೆಂಡ್ ಆವರಣದಲ್ಲಿ ಇದುದ್ದನ್ನು ಗಮನಿಸಿ ಅದರ ಬಗ್ಗೆ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಮತ್ತು ಪೊಲೀಸರು ನೀಡಿರುವ ಸ್ಕೆಚ್‌ನ್ನು ಧೃಢೀಕರಿಸಿ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಕೊರಟಗೆರೆ ಪೊಲೀಸರು ನೀಡಿದ ಅರ್ಜಿ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅರ್ಜಿಯನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನ್ನು ನಿಪಿ-12

ಎಂದು, ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಸೈಟ್ ಪ್ಲಾನ್ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸೈಟ್ ಪ್ಲಾನ್ ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಶ್ರೀ. ಬಿ.ಕೆ.ಪಿ.ಎಸ್. ವಕೀಲರಿಂದ 1 ನೇ ಆರೋಪಿ ಪರವಾಗಿಃ-</u>**

ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಎನ್.ಟಿ.ಆರ್. ಕಂಪರ್ಟ್ ಹೆಸರಿನಲ್ಲಿ ಇರುವುದಿಲ್ಲ. ನಾನು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೊಸ್ಕರ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ. ಕೆ.ಕೆ. ವಕೀಲರಿಂದ 2 ರಿಂದ 5 ನೇ ಆರೋಪಿತರ ಪರವಾಗಿಃ-</u>**

ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನವೀನ್ ಕುಮಾರ್ ಅನ್ನುವ ಸುಮಾರು ಹೆಸರುಗಳು ಇರುತ್ತವೆ ಎನ್ನುವುದು ನಿಜ. ಕೊರಟಗೆರೆ ಪೊಲೀಸರು ನಿಪಿ-11 ರಂತೆ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿ. 03.09.2024 ರಂದು ನಾನು ಅರ್ಜಿ ಸ್ವಿಕರಿಸಿರುವುದಿಲ್ಲ ಮತ್ತು ಆ ದಿನ ನಾನು ಕರ್ತವ್ಯದ ಮೇಲೆ ಇರಲಿಲ್ಲ ಎಂದರೆ ಸರಿಯಲ್ಲ. ಪೊಲಿಸರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**